INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -01,January-February, 2026
Page No,45-53
Peer -Reviewed, Refereed Journal

# ಮೈಸೂರು ರಾಜ್ಯಕ್ಕೆ ಮಹಾರಾಣಿ ಲಕ್ಷ್ಮಮ್ಮಣ್ಣಿ ಅವರ ಕೊಡುಗೆಗಳು

**ಚೆಲುವಾಂಬಿಕ ಬಿ.ಕೆ.[1]**

ಮೈಸೂರು ಸಾಮ್ರಾಜ್ಯದ ಪ್ರಮುಖ ರಾಣಿ ಮತ್ತು ಆಡಳಿತಗಾರ್ತಿ ಮಹಾರಾಣಿ ಲಕ್ಷ್ಮಮ್ಮಣ್ಣಿಯವರು ಪ್ರಮುಖ ಸ್ಥಾನ ಪಡೆದಿದ್ದಾರೆ. ಸ್ತ್ರೀಯರು ರಾಣಿಯರಾಗಿ, ಆಡಳಿತಗಾರರಾಗಿ, ಸೈನ್ಯಾಧಿಪತಿಗಳಾಗಿ ರಾಜಕೀಯ ಮುತ್ಸದ್ಧಿಗಳಾಗಿ ಹೀಗೆ ನಾನಾ ರೀತಿಯಲ್ಲಿ ತೊಡಗಿಸಿಕೊಂಡು ಸ್ಥಾನಗೈದು ಇತಿಹಾಸ ಪುಟಗಳಲ್ಲಿ ಅಮರರಾಗಿವುದನ್ನು ನೋಡುತ್ತೇವೆ. ಇಂತಹ ದಿಟ್ಟ ನಾರಿಯರ ಸಾಲಿನಲ್ಲಿ ಮೈಸೂರು ಒಡೆಯರ ರಾಜಮನೆತನಕ್ಕೆ ಸೇರಿದ ಮಹಾರಾಣಿ ಲಕ್ಷ್ಮಮ್ಮಣ್ಣಿಯವರು ಅಗ್ರಪಂಕ್ತಿಯಲ್ಲಿ ನಿಲ್ಲುತ್ತಾರೆ. ಅನಿವಾರ್ಯ ಕಾರಣಗಳಿಂದ ಬ್ರಿಟೀಷರ ಕೈವಶವಾಗಿದ್ದ ಮೈಸೂರು ರಾಜ್ಯವನ್ನು ಹಿಂದಕ್ಕೆ ಪಡೆದು ಪುನಃ ಅದೇ ಮನೆತನದವರನ್ನು ಅಧಿಕಾರಕ್ಕೆ ತರುವುದರಲ್ಲಿ ಧೀರರಾಣಿ ಲಕ್ಷ್ಮಮ್ಮಣ್ಣಿಯವರು ವಹಿಸಿದ ಪಾತ್ರ ಅನನ್ಯವಾದುದು. ಪಸ್ತುತ ಲೇಖನದಲ್ಲಿ ಮೈಸೂರು ರಾಜ್ಯಕ್ಕೆ ಮಹಾರಾಣಿ ಲಕ್ಷ್ಮಮ್ಮಣ್ಣಿಯವರ ಕೊಡುಗೆ ಏನೆಂಬುದನ್ನು ಕುರಿತು ಬೆಳಕನ್ನು ಚೆಲ್ಲುವ ಪ್ರಯತ್ನವನ್ನು ಈ ಲೇಖನದಲ್ಲಿ ನಿರೂಪಿಲಾಗಿದೆ.

ಯಾದವ ವಂಶದ ರಕ್ಷಣಾಮಣಿಯೆನಿಸಿದ ಲಕ್ಷ್ಮಮ್ಮಣ್ಣಿ ಮೈಸೂರು ಸೇನೆಯಲ್ಲಿದ್ದ ಕತ್ತಿಗೋಪಾಲ ರಾಜ ಅರಸರ ಪುತ್ರಿ. ಸಾ.ಶ.1760ರಲ್ಲಿ ಎರಡನೇ ಕೃಷ್ಣರಾಜಒಡೆಯರ ತಾಯಿ ಮಹಾರಾಣಿ ದೇವಾಜಮ್ಮಣ್ಣಿಯವರು ತಮ್ಮ ಮಗನಿಗೆ ಲಕ್ಷ್ಮಮ್ಮಣ್ಣಿ ಸರಿಯಾದ ಕನ್ಯೆಯೆಂದು ತಿಳಿದು ಕೃಷ್ಣರಾಜ ಒಡೆಯರಿಗೆ ಮದುವೆ ಮಾಡಿದರು. ಹೀಗೆ ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಲಕ್ಷ್ಮಮ್ಮಣ್ಣಿ ಕೃಷ್ಣರಾಜ ಒಡೆಯರ ದ್ವಿತೀಯ ಪುತ್ರಿಯಾಗಿ ಮೈಸೂರು ಅರಮನೆ ಸೇರುತ್ತಾಳೆ. ಈ ಮದುವೆ ನಡೆದ ಕೂಡಲಿ ವಿಧವೆ ಮಹಾರಾಣಿ ದೇವಾಜಮ್ಮಣ್ಣಿಯವರು ತೀರಿಕೊಂಡರು ಅನತಿ ಕಾಲದಲ್ಲಿಯೇ ಎರಡನೇ ರಾಜ ಒಡೆಯರು ಕೂಡ ದೈವಾಧೀನರಾದರು. ಲಕ್ಷ್ಮಮ್ಮಣ್ಣಿ ತಮ್ಮ 24ನೇ ವಯ್ಸಸಿಗೆ ವಿಧವೆಯಾದರು. ಭರತಖಂಡದಲ್ಲಿ ಆಗ ಪರಿಸ್ಥಿತಿ ಸರಿಯಿರಲಿಲ್ಲ ಮೊಘಲ ಸಾಮ್ರಾಜ್ಯ ಕುಸಿಯುತ್ತಿತ್ತು ಮತ್ತು ನಿಜಾಮ್ ಪೇಶ್ವೆಗಳು, ದಖನ್ ನವಾಬರು ಎಲ್ಲ ಯುದ್ಧದಲ್ಲಿ ಆಸಕ್ತರಾಗಿದ್ದರು. ಯಾವ ರಾಜ್ಯಕ್ಕೂ ಕ್ಷೇಮವಿರಲಿಲ್ಲ.

[1]. **ಸಂಶೋಧಕರು,ಇತಿಹಾಸ ವಿಭಾಗ,ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ,ಮೈಸೂರು.**

ಸಾಮಾನ್ಯ ಜನರು ತುಂಬ ತೊಂದರೆಗೆ ಈಡಾದರು. ಕೃಷ್ಣರಾಜ ಒಡೆಯರಿಗೆ ಇಬ್ಬರು ಗಂಡು ಮಕ್ಕಳು ಹೈದರಾಲಿ ಇವರ ಪೈಕಿ ಹಿರಿಯರ ಹಕ್ಕನ್ನು ಕಡೆಗಣಿಸಿ ಕಿರಿಯರನ್ನು ಸಿಂಹಾಸನದಲ್ಲಿ ಕೂಡಿಸಿದನು. ಆತನಿಗೆ ಆಗ ನಾಲ್ಕು ವರ್ಷ ವಯಸ್ಸಾಗಿತ್ತು ಆತನೂ ಸಹ ಸಾ.ಶ.1770ರಲ್ಲಿ ತನ್ನ ಎಂಟನೆಯ ವಯಸ್ಸಿನಲ್ಲಿಯೇ ತೀರಿಕೊಂಡನು ಇಂತಹ ಸಂದಿಗ್ಧಸಮಯದಲ್ಲಿ ಮಹಾರಾಣಿ ಲಕ್ಷ್ಮಮ್ಮಣ್ಣಿ ಅವರು ಒಡೆಯರ ಮನೆತನದ ಸಂರಕ್ಷಕರಾಗಿ ನಿಂತರು. ಎರಡನೇ ಕೃಷ್ಣರಾಜ  ಒಡೆಯರ ಅನಂತರ ಮೈಸೂರು ಸಿಂಹಾಸನಕ್ಕೆ ದಕ್ಷರೂ ಪ್ರಬುದ್ಧರೂ ಆದ ಉತ್ತರಾಧಿಕಾರಿಗಳಿರಲಿಲ್ಲ. ಎರಡನೇ ರಾಜ ಒಡೆಯರ್ ಅವರ ಜೀವಿತ ಕಾಲದಲ್ಲಿಯೇ ರಾಜ್ಯದ ಸಮಸ್ತ ಅಧಿಕಾರವು ಹೈದರ್ ಮತ್ತು ಅವನ ಮಗ ಟಿಪ್ಪುವಿನ ವಶವಾಗಿತ್ತು. ಮಹಾರಾಜರ ನಿಧನದ ನಂತರ ಹೈದರನು ಅಧಿಕಾರವನ್ನು ಸಂಪೂರ್ಣವಾಗಿ ತನ್ನ ವಶಪಡಿಸಿಕೊಂಡರು ಒಡೆಯರ ಮನೆತನದ ನಿಜವಾದ ಹಕ್ಕುದಾರರನ್ನು ಅಲಕ್ಷಿಸಿದನು. ರಾಜಮನೆತನಕ್ಕೆ ನ್ಯಾಯಬದ್ಧವಾಗಿ ಸಿಗಬೇಕಾದ ಅಧಿಕಾರವನ್ನು ದೊರಕಿ ಸಿಕೊಳ್ಳಲು ಲಕ್ಷ್ಮಮ್ಮಣ್ಣಿ ಪ್ರಯತ್ನಿಸಿದರು. ಮಹಾರಾಣಿ ಲಕ್ಷ್ಮಮ್ಮಣ್ಣಿಯವರು ಹಿಂದೆ ಹಕ್ಕನ್ನು ಕಳೆದುಕೊಂಡಿದ್ದ ಹಿರಿಯ ಮಗ ಬೆಟ್ಟದ ಚಾಮರಾಜ ಒಡೆಯರನ್ನು ಸಿಂಹಾಸನದಲ್ಲಿ ಕೂರಿಸುವಂತೆ ಪ್ರಧಾನಿ ತಿರುಮಲ ಆಯ್ಯಂಗಾರ್ ಅವರ ಮೂಲಕ ಹೈದರಾಲಿಗೆ ಸೂಚಿಸಿದರು. ಆದರೆ ಆತನೂ ಬಹುಬೇಗ ನಿಧನ ಹೊಂದಿದ. ಪುನಃ ಸಾ.ಶ.1776ರಲ್ಲಿ ಮೈಸೂರಿನ ಸಿಂಹಾಸನ ತೆರವಾಯಿತು. ನವಾಬ್ ಹೈದರಾಲಿ, ರಾಜರ ಅನುಬಂಧಿ ಕುಟುಂಬವೊಂದರ ಒಬ್ಬ ಹುಡುಗನನ್ನು ಆರಿಸಿ ಆತನನ್ನು ದತ್ತು ತೆಗೆದುಕೊಳ್ಳಬೇಕೆಂದೂ ಆತನೇ ಪಟ್ಟಕ್ಕೆ ಬರಬೇಕೆಂದು ನೇಮಿಸಿದನು.

ಮಹಾರಾಣಿ ಲಕ್ಷ್ಮೀ ಅಮ್ಮಣ್ಣಿಯವರಿಗೆ ಪಾಲನಾಧಿಕಾರವನ್ನು ನಿಷೇಧಿಸಲಾಯಿತು. ಹೀಗೆ ಹೈದರನು ಲಕ್ಷ್ಮಮ್ಮಣ್ಣಿಯವರನ್ನು ಉಪೇಕ್ಷಿಸಿ ಒಡೆಯರ ಮನೆತನದ ಸಂಬಂಧಿಯಾದ ಖಾಸಾ ಚಾಮರಾಜ ಒಡೆಯರ್ ಎಂಬ ಬಾಲಕನನ್ನು ಸಿಂಹಾಸನದಲ್ಲಿ ಕೂರಿಸಿದನು. ಇದರಿಂದ ಬೇಸರಗೊಂಡ ಲಕ್ಷ್ಮಮ್ಮಣ್ಣಿಯವರು ಹೈದರನ ವಿರುದ್ಧ ಪ್ರತಿಭಟಿಸಲು ನಿಶ್ಚಯಿಸಿದರು. ಆದರೆ ಸನ್ನಿವೇಶ ಅನುಕೂಲಕರವಾಗಿರಲಿಲ್ಲ. ದಳವಾಯಿಗಳ ಪ್ರಾಬಲ್ಯ ಹೆಚ್ಚಾಯಿತು. ಹೈದರ್ ಮತ್ತು ಟಿಪ್ಪು ಸರ್ವಾಧಿಕಾರಿಗಳಂತೆ ವರ್ತಿಸಿದ್ದರಿಂದ ರಾಜಕೀಯ ವಲಯದಲ್ಲಿ ಒಡೆಯರು ತಮ್ಮ ಪ್ರಭಾವ ಮತ್ತು ಪ್ರಾಮುಖ್ಯತೆಯನ್ನು ಕಳೆದುಕೊಂಡಿದ್ದರು. ಆದರೆ ಮಹಾರಾಣಿ ಲಕ್ಷ್ಮೀ ಅಮ್ಮಣ್ಣಿಯವರು ಹೈದರಾಲಿಯ ಸರ್ವಾಧಿಕಾರದ ಧೋರಣೆಗೆ ಬಲಿಯಾಗುವ ಸ್ವಭಾವದವರಾಗಿರಲಿಲ್ಲ. ರಾಜನಿಷ್ಠ ಬೆಂಬಲಿಗರ ಸಲಹೆಗಳನ್ನು ಗೋಪ್ಯವಾಗಿ ಪಡೆದು ಹೈದರಾಲಿಯ ವಿರುದ್ಧವಾಗಿ ಮರಾಠರ ಬಳಿಗೆ ನಿಯೋಗಗಳನ್ನು ಕಳಿಸಿದರು. ತಮ್ಮ ಬೆಂಬಲಿಗರಲ್ಲಿ ಅನೇಕರನ್ನು ಇಂತಹ ರಹಸ್ಯ ನಿಯೋಗಗಳನ್ನು ಕಳಿಸಲು ಉಪಯೋಗಿಸಿಕೊಂಡರು. ಅವರಲ್ಲಿ ಮುಖ್ಯರಾದವರು ತಿರುಮಲರಾವ್ ಈತನು ಮದ್ರಾಸ್‌ನ

ಗವರ್ನರ್‌ನಾಗಿದ್ದ ಲಾರ್ಡ್ ಫಿಗಟನ್‌ನೊಡನೆ ಸಂಧಾನ ನಡೆಸಿದನಾದರೂ ಅವನು ಕೆಲವೇ ದಿನಗಳಲ್ಲಿ ಮರಣ ಹೊಂದಿದ್ದರಿಂದ ತಿರುಮಲರಾಯನ ಸಂಧಾನ ಯಶಸ್ವಿಯಾಗಲಿಲ್ಲ.

**ಬ್ರಿಟೀಷರೊಂದಿಗೆ ತಿರುಮಲರಾಯನ ಸಂಧಾನ :**

ಹೈದರನು ಎರಡನೇ ಮೈಸೂರು ಯುದ್ಧದಲ್ಲಿ ಬ್ರಿಟೀಷರೊಂದಿಗೆ ಕಾದಾಡುತ್ತಿದ್ದ ಸಂದರ್ಭವನ್ನರಿತು ತಿರುಮಲರಾಯನು ತಂಜಾವೂರು ಆಸ್ಥಾನದಲ್ಲಿ ರೆಸಿಡೆಂಟ್‌ನಾಗಿದ್ದ ಜಾನ್ ಸುಲೇವಾನ್‌ನೊಡನೆ ಸಂಧಾನ ನಡೆಸಿದನು. ಅವನು ಲಾರ್ಡ್ ಮ್ಯಾಕರ್‌ಟನಿಯ ಅನುಮತಿಯನ್ನು ಪಡೆದು ಹೈದರನನ್ನು ಪದಚ್ಯುತಿಗೊಳಿಸಲು ಶ್ರೀರಂಗಪಟ್ಟಣದ ಕಡೆ ತನ್ನ ಸೈನ್ಯದೊಡನೆ ಧಾವಿಸಿದನು. ಸಾ.ಶ.1782ರ ಮೇ ತಿಂಗಳಲ್ಲಿ ಲಕ್ಷ್ಮಮ್ಮಣ್ಣಿಯು ಮದ್ರಾಸ್ ಗವರ್ನರ್ ಲಾರ್ಡ್ ಮ್ಯಾಕರ್‌ಟನಿಗೆ ಪತ್ರ ಬರೆದರು. ಅದರಲ್ಲಿ ಸೈನ್ಯದ ವೆಚಕ್ಕಾಗಿ ಒಂದು ಕೋಟಿ ಆರ್ಕಾಟ್ ರೂಪಾಯಿಗಳನ್ನು 15 ಲಕ್ಷದ ಜಹಗೀರನ್ನು ದತ್ತಿಯಾಗಿಯೂ ನೀಡುವುದಾಗಿಯೂ ತಿಳಿಸಿದಳು. ಜೊತೆಗೆ ರಾಜ್ಯವನ್ನು ರಕ್ಷಿಸಿ ನಮ್ಮ ಮನೆತನಕ್ಕೆ ಹಿಂದಿರುಗಿಸಿದ ಕಂಪನಿ ಸೈನ್ಯದ ನಿರ್ವಹಣೆಗಾಗಿ 36 ಲಕ್ಷಗಳನ್ನು ಕೊಡುವನೆಂದು ತಿಳಿಸಿದಳು. ಬಳಿಕ ಸುಲೇವಾನ್ ಮತ್ತಿತ್ತರು ತಿರುಮಲರಾಯರ ನಡುವೆ ಮಾತುಕತೆ ನಡೆದು 1782ರ ಸೆಪ್ಟಂಬರ್ 27ರಂದು ಮದ್ರಾಸ್ ಗವರ್ನರ್‌ನು ಮಹಾರಾಣಿಯ ಪರವಾಗಿ ತಿರುಮಲರಾಯನೊಂದಿಗೆ ಒಪ್ಪಂದ ಮಾಡಿಕೊಳ್ಳಲು ಅನುಮತಿ ನೀಡಿದನು. ಈ ಒಪ್ಪಂದವು ಎರಡು ಅಂಶಗಳನ್ನು ಹೊಂದಿತ್ತು. ಒಂದು ಪ್ರಾಚೀನ ಮೈಸೂರು ಮನೆತನಕ್ಕೆ ನ್ಯಾಯವಾದ ಉತ್ತರಾಧಿಕಾರಿಯನ್ನು ಪುನರ್‌ಸ್ಥಾಪನೆಗೊಳಿಸುವುದು ಇನ್ನೊಂದು ಮಹಾರಾಣಿಯವರು ಪತ್ರದಲ್ಲಿ ತಿಳಿಸಿದ ಸಂಪತ್ತನ್ನು ಮದ್ರಾಸ್ ಸರ್ಕಾರಕ್ಕೆ ನೀಡುವುದು

**ಸಾ.ಶ.1782ರ ಒಪ್ಪಂದ :**

ಈ ಒಪ್ಪಂದವನ್ನು 'ದಿ ರಾಣಿ ಟ್ರೀಟಿ, ದಿ ರೆಸ್ಟೋರೇಷನ್ ಆಫ್ ದಿ ಹಿಂದೂಡೈನಾಸ್ಟಿ ಆಫ್ ಮೈಸೂರು' ಎಂದು ಕರೆಯಲಾಗುತ್ತದೆ. ಇದಕ್ಕೆ ತಂಜಾವೂರಿನಲ್ಲಿ 1782ರ ಅಕ್ಟೋಬರ್ 28ರಂದು ಸಹಿ ಮಾಡಲಾಯಿತು. ಈ ಒಪ್ಪಂದವೂ 15 ವಿಧಿಗಳನ್ನು ಹೊಂದಿದ್ದು ರೆವೆರೆಂಡ್ ಸ್ವಾವರ್ಟ್ಸ್‌ನಿಂದ ದೃಢೀಕರಿಸಲ್ಪಟ್ಟಿತು. ಒಪ್ಪಂದದ ಒಂದನೇ ವಿಧಿಯು ಹೈದರ್ ಆಲಿಯು ಒಡೆಯರಿಂದ ಆಡಳಿತವನ್ನು ಕಸಿದುಕೊಂಡಿರುವುದು ತಮಗೆ ತಿಳಿದ ವಿಷಯವೆಂದೂ ಅವನನ್ನು ಅಧಿಕಾರದಿಂದ ಇಳಿಸಲು ಸೈನ್ಯವನ್ನು ಕಳುಹಿಸಿ ಮೈಸೂರು ರಾಜ್ಯ ಮನೆತನದವರನ್ನು ರಾಜ್ಯದಲ್ಲಿ ಪುನರ್ ಸ್ಥಾಪಿಸುವರೆಂದು ತಿಳಿಸುತ್ತದೆ.

ಎರಡು ಮೂರು ನಾಲ್ಕನೆಯ ವಿಧಿಗಳು ಮಹಾರಾಣಿಯು ಹೇಳಿರುವ ಹಣವನ್ನು ಹೈದರ್‌ನಿಂದ ಅವನ ವಶದಲ್ಲಿರುವ ಪ್ರದೇಶಗಳನ್ನು ವಶಪಡಿಸಿಕೊಂಡು ರಾಣಿಗೆ ಒಪ್ಪಿಸುವುದರ ಮೂಲಕ ಪಡೆಯುವುದೆಂಬುದನ್ನು ತಿಳಿಸುತ್ತದೆ. ಇದರಂತೆ ಕೊಯಮತ್ತೂರನ್ನು ವಶಪಡಿಸಿಕೊಂಡು ರಾಣಿಗೆ ಒಪ್ಪಿಸಿದರೆ 3 ಲಕ್ಷ ಕಂಠೀರವ ಪಗೋಡಗಳನ್ನು ಕೊಡಬೇಕು. ಫಾಲ್‌ಘಾಟ್ ಮತ್ತು ಹರದನಹಳ್ಳಿ ಮತ್ತಿತರ ಕೋಟೆಗಳನ್ನು ರಾಣಿಗೆ ಒಪ್ಪಿಸಿದಾಗ ಒಂದು ಲಕ್ಷ ಪಗೋಡಗಳನ್ನು ಕೊಡಬೇಕು ಮೈಸೂರು ಕೋಟೆಯನ್ನು ವಶಪಡಿಸಿಕೊಂಡು ರಾಣಿಗೆ ಒಪ್ಪಿಸಿದಾಗ ಒಂದು ಲಕ್ಷವನ್ನು, ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡ ನಂತರ ಐದು ಲಕ್ಷ ಪಗೋಡಗಳನ್ನು ಕೊಡಬೇಕೆಂದು ಒಪ್ಪಂದದಲ್ಲಿ ಉಲ್ಲೇಖಿಸಲಾಗಿತ್ತು.

ಇವೆಲ್ಲದರ ಜೊತೆಗೆ ಬ್ರಿಟೀಷ್ ಸೈನ್ಯದ ಅಗತ್ಯ ರಾಣಿಗೆ ಇದ್ದಲ್ಲಿ ಬ್ರಿಟೀಷ್ ಸೈನ್ಯದ ತುಕಡಿಯೊಂದನ್ನು ಮೈಸೂರಿನಲ್ಲಿ ಇಡಲಾಗುತ್ತದೆಯೆಂದೂ ಆ ಸೈನ್ಯದ ಖರ್ಚು ವೆಚ್ಚಗಳು ನಿರ್ವಹಣೆಯನ್ನು ರಾಣಿಯೇ ಭರಿಸಬೇಕೆಂದು ತಿಳಿಸಲಾಗಿತ್ತು. ಆದರೆ ಕಂಪನಿ ಕಂದಾಯ ವಸೂಲಿ ಮಾಡುವುದು ಅಧಿಕಾರಿಗಳನ್ನು ನೇಮಕ ಮಾಡುವುದು ಇತ್ಯಾದಿ ಒಳಾಡಳಿತದಲ್ಲಿ ತಾನು ಹಸ್ತಕ್ಷೇಪ ಮಾಡುವುದಿಲ್ಲವೆಂದು ತಿಳಿಸಲಾಯಿತು. ಲಕ್ಷ್ಮಮ್ಮಣ್ಣಿಯವರ ಮುಂದಾಲೋಚನೆಯನ್ನು ಜಾಣತನವನ್ನು ಚಾಣಾಕ್ಷತನವನ್ನು ಗುರುತಿಸುವ ಅಂಶವೆಂದರೆ ಅದು ಕಂಪನಿಯು ಹೈದರ್‌ನನ್ನು ಸೋಲಿಸಲಾಗದಿದ್ದಲ್ಲಿ ಅಥವಾ ಅವನೊಂದಿಗೆ ಒಪ್ಪಂದವನ್ನು ಮಾಡಿಕೊಂಡಲ್ಲಿ ನಿಷ್ಠಾವಂತ ನಿಯೋಗಿಗಳ ರಕ್ಷಣೆಯನ್ನು ಮಾಡುವುದಾಗಿಯೂ, ಅವರಿಂದ ಪಡೆದ ಹಣವನ್ನು ಹಿಂದಿರುಗಿಸುವುದಾಗಿಯೂ ಹೇಳಲಾಯಿತು. ಆದರೆ ಹೈದರನು ನಿಜಾಮ ಮತು ಮರಾಠರಿಂದ ವಶಪಡಿಸಿಕೊಂಡ ಪ್ರದೇಶಗಳನ್ನು ಕಂಪನಿಯು ತಮಗೆ ಇಷ್ಟ ಬಂದಂತೆ ಇಟ್ಟುಕೊಳ್ಳುವುದೆಂದು ತೀರ್ಮಾನಿಸಲಾಯಿತು. ಆದರೆ ಈ ಒಪ್ಪಂದಕ್ಕೆ ಸಹಿಯಾದ ಒಂದೇ ತಿಂಗಳಲ್ಲಿ ಹೈದರನು ಮರಣ ಹೊಂದಿದನು.

ಅನಂತರ ಕಾಲೋನೆಲ್ ಲಾಂಗ್‌ನ ನೇತೃತ್ವದಲ್ಲಿ ಕಂಪನಿಯು 1782ರ ಸೈನ್ಯವನ್ನು ಕಳುಹಿಸಿತು. ಕಂಪನಿಯ ಸೈನ್ಯವು ಕೊಯಮತ್ತೂರನ್ನು ವಶಪಡಿಸಿಕೊಂಡು ಅದರ ಕೋಟೆಯ ಮೇಲೆ ಧ್ವಜವನ್ನು ಹಾರಿಸಿತು. ಕೊಯಮತ್ತೂರಿನ ನಿರ್ವಹಣೆಯನ್ನು ಲಾಂಗನು ತಿರುಮಲರಾಯನಿಗೆ ವಹಿಸಿದನು. ಅನಂತರ ಫುಲ್ಲರಟನು 1783ರಲ್ಲಿ ಪಾಲ್‌ಘಾಟ್‌ನ್ನು ವಶಪಡಿಸಿಕೊಂಡನು. ಅನಂತರ ಹೆಜ್ಜಲಹಟ್ಟಿ ಕಣಿವೆಯ ಮೂಲಕ ಶ್ರೀರಂಗಪಟ್ಟಣವನ್ನು ಮುತ್ತಬಹುದೆಂದು ನಿಯೋಜಿಸಿದನು. ಆ ವೇಳೆಗೆ ಸೈನಿಕ ಕಾರ್ಯಾಚರಣೆಯನ್ನು ನಿಲ್ಲಿಸಬೇಕೆಂದು ಇಂಗ್ಲೀಷ್ ಶಾಂತಿ ಸ್ಥಾಪಕರಾದ ಕಮಿಷನ್‌ರಿಂದ ಅಪ್ಪಣೆಯಾಯಿತು. ಇದರಿಂದಾಗಿ ಫುಲ್ಲರಟನು ಟಿಪ್ಪುವಿನೊಂದಿಗೆ ಒಪ್ಪಂದ ಮಾಡಿಕೊಳ್ಳಲು ಮಂಗಳೂರಿಗೆ ತೆರಳಿದನು. ಇದಕ್ಕೆ ಕಾರಣ ಯುರೋಪಿನಲ್ಲಿ ಬ್ರಿಟೀಷರಿಗೂ ಫ್ರೆಂಚರಿಗೂ ನಡೆಯುತ್ತಿದ್ದ

ಯುದ್ಧ ನಿಂತು ಶಾಂತಿ ಒಪ್ಪಂದ ಏರ್ಪಟ್ಟಿತು. ಇಂತಹ ಸಂದರ್ಭದಲ್ಲಿ ಲಾರ್ಡ್ ಮ್ಯಾಕರ್ಟನಿಗೆ ಹಣದ ಮತ್ತು ಇತರೆ ತೊಂದರೆಗಳಿಂದ ಟಿಪ್ಪುವಿನೊಂದಿಗೆ ಯುದ್ಧ ಮಾಡಲು ಸಾಧ್ಯವಿರಲಿಲ್ಲ. ಯುರೋಪಿನಲ್ಲಿ ಆದ ಒಪ್ಪಂದದಂತೆ ಭಾರತದಲ್ಲಿಯೂ ಟಿಪ್ಪುವಿನೊಡನೆ ಒಪ್ಪಂದ ಮಾಡಿಕೊಳ್ಳುವ ಸಂದರ್ಭ ಒದಗಿಬಂತು. ಲಾರ್ಡ್ ಮ್ಯಾಕರ್ಟನ್ ಟಿಪ್ಪುವಿಗೆ ಪತ್ರ ಬರೆದು ಅದರಲ್ಲಿ ಯುರೋಪಿನಲ್ಲಾದ ಒಪ್ಪಂದವನ್ನು ಪ್ರಸ್ತಾಪಿಸಿ ಯುದ್ಧವನ್ನು ನಿಲ್ಲಿಸಿ ಸಂಧಾನಕ್ಕೆ ಬರಬೇಕೆಂದು ಕಳುಹಿಸಿದನು. ಕೊನೆಗೆ ಅಪ್ಪಾಜಿರಾವ್ ಮತ್ತು ಮೂವರು ಕಮಿಷನರುಗಳನ್ನು ಕಳುಹಿಸದ ಮೇಲೆ 1784 ಮಾರ್ಚ್ 11ರಂದು ಟಿಪ್ಪು ಒಪ್ಪಂದಕ್ಕೆ ಸಹಿ ಹಾಕಿದನು. ಈ ಒಪ್ಪಂದದಂತೆ ಯುದ್ಧದಲ್ಲಿ ಗೆದ್ದ ಪ್ರದೇಶಗಳನ್ನು ಹಿಂದಿರುಗಿಸುವುದಾಗಿಯೂ ಈ ಯುದ್ಧ ನಿಲ್ಲಿಸಿ ಸೆರೆ ಹಿಡಿದವರನ್ನು ಬಿಡುಗಡೆ ಮಾಡುವುದಾಗಿಯೂ ಒಪ್ಪಿದನು.

**ರಾಜನಿಷ್ಠರ ಸಂಚು :**

ಹೈದರನ ಮರಣಾನಂತರ ಟಿಪ್ಪುವು ರಾಜ್ಯದ ಅಧಿಕಾರವನ್ನು ವಶಪಡಿಸಿಕೊಂಡದ್ದು ಅನೇಕರಲ್ಲಿ ಅಸಮಾಧಾನವನನು ಉಂಟುಮಾಡಿತ್ತು. ರಾಜನ ಅನುಯಾಯಿಗಳು ತಮ್ಮ ರಾಜನನ್ನು ಸೆರೆಯಲ್ಲಿಟ್ಟಿರುವುದು ಅವರಿಂದ ಅಧಿಕಾರವನ್ನು ಕಿತ್ತು ಕೊಂಡಿರುವುದು ಅಧಿಕಾರವಿಲ್ಲದೆ ಅವರು ಅನುಭವಿಸುತ್ತಿರುವ ದುಃಖವನ್ನು ನೋಡಿ ಅತಿಯಾದ ವ್ಯಸನವನ್ನು ವ್ಯಕ್ತಪಡಿಸುತ್ತಾರೆ. ಹೇಗಾದರೂ ಮಾಡಿ ತಮ್ಮ ರಾಜನಿಗೆ ನ್ಯಾಯ ದೊರಕಿಸಿಕೊಡಬೇಕೆಂದು ರಾಜಮನೆತನದವರ ಅನುಯಾಯಿಗಳಾದ ಹಿಂದೂಗಳು, ಮುಸ್ಲೀಮರು ಪ್ರಯತ್ನ ಪಡುತ್ತಾರೆ. ಇದಕ್ಕಾಗಿ ಎರಡು ಬಗೆಯ ಸಂಚನ್ನು ರೂಪಿಸುತ್ತಾರೆ.

1.ಮದ್ರಾಸಿನಲ್ಲಿದ್ದ ಬ್ರಿಟೀಷ್ ಅಧಿಕಾರಿಗಳಿಂದ ಸಹಾಯವನ್ನು ಪಡೆಯುವುದು.

2.ಟಿಪ್ಪುವು ರಾಜಧಾನಿಯಿಂದ ಹೊರಗಡೆಯಿದ್ದಾಗ ಖಿಲ್ಲೆದಾರನು ಶ್ರೀರಂಗಪಟ್ಟಣದ ಕೋಟೆಯ ಬಾಗಿಲನ್ನು ತೆರೆಯುವುದು. ಅಂಚೆ ವಿಭಾಗದ ಮುಖ್ಯಸ್ಥನಾಗಿದ್ದ ಶಾಮಯ್ಯ ಈ ಸಂಚಿನ ಮುಖ್ಯಸ್ಥನಾಗಿದ್ದನು.

ಇದರ ಇತರ ಸದಸ್ಯರೆಂದರೆ ಶಾಮಯ್ಯನ ಸಹೋದರ ರಂಗಯ್ಯ, ಕೊಯಮತ್ತೂರಿನ ಪ್ರಾಂತ್ಯಾಧಿಕಾರಿಯಾಗಿದ್ದ ಸಿಂಗಯ್ಯ, ಪೇ ಮಾಸ್ಟರ್ ಮತ್ತು ಪಟ್ಟಣದ ಮೇಜರ್ ಆಗಿದ್ದ ನರಸಿಂಗರಾಯ ಇವರಲ್ಲದೆ ಇಬ್ಬರು ಸುಬೇದಾರರು ಒಂಬತ್ತು ಜನ ಮುಖ್ಯಸ್ಥರು ಹಿಂದೂ ಮತ್ತು ಮುಸ್ಲಿಂ ಸೈನ್ಯದ ಕಮ್ಯಾಂಡೆಂಟರು ಒಂದು ನೂರು ಜನರಿದ್ದ ಸೈನ್ಯದ ಮುಖ್ಯಸ್ಥನಾಗಿದ್ದ ಮತ್ತೊಬ್ಬ ಸುಬೇದಾರನು ಈ ಸಂಚಿನಲ್ಲಿ ಸೇರಿದ್ದರು. ಮುಂದೆ ಕಾರ್ಯಾ ಸ್ಥಾನದಲ್ಲಿರುವ ಎಲ್ಲಾ ಯುರೋಪಿಯನ್ ಮತ್ತು ಸ್ಥಳೀಯ ಖೈದಿಗಳನ್ನು ಬಿಡುಗಡೆ ಮಾಡಿ ಜನರಲ್ ಮ್ಯಾಥ್ಯೂಸ್ ಕೈಕೆಳಗೆ ಇಡುವಂತೆ, ರಾಜಧಾನಿಯ ಎಲ್ಲಾ

ಬಾಗಿಲುಗಳನ್ನು ಖಜಾನೆ ಮತ್ತು ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಬೇಕೆಂದು ತೀರ್ಮಾನಿಸಲಾಯಿತು. ಇದರ ಉಸ್ತುವಾರಿಯನ್ನು ನರಸಿಂಗರಾವ್ ಅವರಿಗೆ ವಹಿಸಲಾಯಿತು. ಬ್ರಟೀಷ್ ಸೈನ್ಯಕ್ಕೆ, ಮರಾಠರಿಗೆ ಮತ್ತು ಕೊಡಗಿಗೆ ತಮಗೆ ಸಹಾಯ ಮಾಡುವಂತೆ ಕೋರಿ ಪತ್ರಗಳನ್ನು ಬರೆಯಲಾಯಿತು. 1783ರ ಜುಲೈ 24 ರಂದು ರಾತ್ರಿ 9 ಗಂಟೆಗೆ ನರಸಿಂಗರಾವ್ ಇದನ್ನು ಕಾರ್ಯರೂಪಕ್ಕೆ ತರುವಂತೆ ಸಿದ್ಧತೆ ಮಾಡಿಕೊಳ್ಳಲಾಯಿತು. ಆದರೆ ಖಿಲ್ಲೆದಾರನಾದ ಸಯ್ಯದ್ ಮಹಮದ್ ಖಾನ್ ಕಛೇರಿಯಿಂದ ಹೊರ ಬರುತ್ತಿದ್ದಾಗ ಅವನ ಕಿವಿಯಲ್ಲಿ ಸಂಚಿನ ವಿಷಯವನ್ನು ಪೂರ್ಣವಾಗಿ ವಿವರಿಸಿದನು . ಕೂಡಲೇ ಅವನು ಕಾರ್ಯಪ್ರವೃತ್ತನಾದನು ನರಸಿಂಗರಾವ್ ಮತ್ತಿತ್ತರ ಸಂಚಿನ ಪ್ರಮುಖರನ್ನು ಕ್ರೂರ ಶಿಕ್ಷೆಗೆ ಒಳಪಡಿಸಲಾಯಿತು. ಸಂಚು ವಿಫಲವಾಯಿತು. ಆದರೆ ಈ ಸಂಚಿನಲ್ಲಿ ಮಹಾರಾಣಿ ಲಕ್ಷ್ಮಮ್ಮಣ್ಣಿ ಹಾಗೂ ಆಕೆಯ ನಂಬಿಕೆಯ ಪ್ರಧಾನಿಯಾಗಿದ್ದ ತಿರುಮಲರಾಯ ವಹಿಸಿದ ಪಾತ್ರ ಮಾಡಿದ ಸಂಚಿನವೈಖರಿ ಅತ್ಯಂತ ಗಮನಾರ್ಹವಾದುದು.

ಮರಾಠರು ಮತ್ತು ನಿಜಾಮರೊಂದಿಗೆ ಟಿಪ್ಪು 1782ರ ಫೆಬ್ರವರಿಯಲ್ಲಿ ಮೈತ್ರಿ ಮಾಡಿಕೊಂಡು ಇಂಗ್ಲೀಷ್ರರನ್ನು ಭಾರತದಿಂದ ಓಡಿಸಬೇಕೆಂದು ಯೋಜನೆಯನ್ನು ರೂಪಿಸುತ್ತಾರೆ. ಅಲ್ಲದೆ ಫ್ರೆಂಚರ ಸಹಾಯವನ್ನು ಬಯಸಿ ಫ್ರಾನ್ಸ್‌ಗೆ ಒಂದು ನಿಯೋಗವನ್ನು ಕಳುಹಿಸುತ್ತಾನೆ. ಟಿಪ್ಪುವಿನ ಆಕ್ರಮಣ ಪ್ರವೃತ್ತಿಯನ್ನು ಅರಿತ ಮದ್ರಾಸ್ ಗವರ್ನರ್‌ನಾದ ಸರ್ ಆರ್ಚಿಬಾಲ್ಡ್ ಕ್ಯಾಂಪ್‌ಬೆಲ್‌ನು ಟಿಪ್ಪುವಿಗೆ ಒಂದು ಪತ್ರ ಬರೆದು ಮಂಗಳೂರು ಒಪ್ಪಂದದ ಪ್ರಕಾರ ತಿರುವಾಂಕೂರಿನ ಮಹಾರಾಜ ಬ್ರಿಟೀಷರ ರಕ್ಷಣೆ ಪಡೆದುಕೊಂಡಿದ್ದಾನೆಂದು ತಿಳಿಸಿದನು. ಇದಕ್ಕೆ ಟಿಪ್ಪು ಒಪ್ಪಂದದ ಕರಾರನ್ನು ತಾನು ಮೀರುವುದಿಲ್ಲವೆಂದೂ ತನ್ನ ಕಾರ್ಯಾಚರಣೆ ಕೇವಲ ಮಲಬಾರ್ ತೀರದಲ್ಲಿರುವ ಕೆಲವು ಪುಂಡ ಪಾಳೆಗಾರರನ್ನು ಅಡಗಿಸುವುದೆಂದು ತಿಳಿಸಿದನು. ಆದರೆ ಟಿಪ್ಪುವಿನ ಸೈನಿಕ ಚಟುವಟಿಕೆಗಳನ್ನು ಗಮನಿಸಿದ ತಿರುವಾಂಕೂರಿನ ರಾಜ ಈ ವಿಷಯವನ್ನು ಮದ್ರಾಸ್ ಗವರ್ನರಿಗೆ ತಿಳಿಸಿದನು. 1789ರಲ್ಲಿ ಟಿಪ್ಪು ತಿರುವಾಂಕೂರಿನ ಕಡೆಗೆ ತನ್ನ ಸೈನ್ಯವನ್ನು ನಡೆಸಿದನು ತಿರುವಾಂಕೂರಿನ ಗಡಿಭಾಗವನ್ನು ಮತ್ತು ಕ್ರಾಂಗನೂರನ್ನು ಮಾತ್ರವಷ್ಟೇ ವಶಪಡಿಸಿಕೊಂಡನು.

ಇದೇ ಸಮಯದಲ್ಲಿ ಇಂಗ್ಲೀಷರು ಶ್ರೀರಂಗಪಟ್ಟಣವನ್ನು ಮುತ್ತುವ ಸಿದ್ಧತೆಯಲ್ಲಿರುವುದು ಟಿಪ್ಪುವಿಗೆ ಗೂಢಚಾರದಿಂದ ತಿಳಿಯಿತು. ಇದೇ ಅವಧಿಯಲ್ಲಿ ಫ್ರಾನ್ಸಿನ ಕ್ರಾಂತಿಯು ಪ್ರಾರಂಭವಾಗಿತ್ತು ಇದರಿಂದಾಗಿ ಟಿಪ್ಪುವಿಗೆ ಫ್ರೆಂಚರಿಂದ ಯಾವುದೇ ಸಹಾಯ ದೊರೆಯಲಿಲ್ಲ ಕೊನೆಗೆ ಸಾಶ.1785 ರಲ್ಲಿ 16ನೇ ಲೂಯಿ ಆಸ್ಥಾನಕ್ಕೆ ಟಿಪ್ಪು ಬಂದು ನಿಯೋಗವನ್ನು ಕಳುಹಿಸುವುದರಲ್ಲಿ ಯಶಸ್ವಿಯಾದ ಕಾರಣ ಫ್ರೆಂಚ್ ಸರ್ಕಾರ ಟಿಪ್ಪುವಿನ ಸಹಾಯಕ್ಕೆ ಒಂದು ಸೈನ್ಯವನ್ನು ಭಾರತಕ್ಕೆ ಕಳುಹಿಸಿತು. ಇದರಿಂದಲೂ ಟಿಪ್ಪುವಿಗೆ ಯಾವುದೇ ಪ್ರಯೋಜನವಾಗಲಿಲ್ಲ ಅನಂತರ ಟಿಪ್ಪು ನಿಜಾಮ ಮತ್ತು ಮಾರಾಠರೊಡನೆ

ಒಪ್ಪಂದ ಮಾಡಿಕೊಂಡನು. ಇದರ ಫಲವಾಗಿ ದಕ್ಷಿಣ ಭಾರತದ ರಾಜಕೀಯ ವಲಯದಲ್ಲಿ ಟಿಪ್ಪು ಪ್ರಭಾವಶಾಲಿಯಾಗಿ ಬೆಳೆದನು. ಮದ್ರಾಸ್ ಗವರ್ನರ್ ಮಹಾರಾಣಿ ಲಕ್ಷ್ಮಮ್ಮಣ್ಣಿಗೆ ಕೊಟ್ಟ ಆಶ್ವಾಸನೆ ಈಡೇರಿಕೆಗಾಗಿ ಪ್ರಯತ್ನ, ಇತ್ತ ಟಿಪ್ಪು ಬ್ರಿಟೀಷರನ್ನು ಸದೆಬಡಿಯಲು ಸಿದ್ದನಾಗುತ್ತಿದ್ದರು ಅತ್ತ ಮದ್ರಾಸ್ ಗವರ್ನರ್ ರಾಣಿಗೆ ಕೊಟ್ಟ ಆಶ್ವಾಸನೆಯನ್ನು ಪೂರ್ಣಗೊಳಿಸಲು ಅವಣಿಸುತ್ತಿದ್ದನು. ಮಹಾರಾಣಿಯ ಪ್ರಧಾನಿಯಾಗಿದ್ದ ತಿರುಮಲರಾಯನು ತಂಜಾವೂರಿನಲ್ಲಿ ಇದ್ದುಕೊಂಡು ನಡೆಯುತ್ತಿದ್ದ ಘಟನೆಗಳನ್ನು ಅವಲೋಕಿಸುತ್ತಿದ್ದನು ಇವನಿಗೆ 1782ರ ಒಪ್ಪಂದದಂತೆ ಬ್ರಿಟೀಷರು 70 ಪಗೋಡಗಳನ್ನು ನಿವೃತ್ತಿ ವೇತನವನ್ನಾಗಿ ನೀಡಿದರು. ನಿವೃತ್ತಿಯಾಗಿದ್ದ ತಿರುಮಲರಾಯನನ್ನು ಸದೆಬಡಿಯಲು ಟಿಪ್ಪು ಪ್ರಯತ್ನಪಟ್ಟನಾದರೂ ತಿರುಮಲರಾಯ ತಪ್ಪಿಸಿಕೊಂಡು ಹೋಗಿ ತಿರುವಾಂಕೂರಿನ ಮಹಾರಾಜನ ರಕ್ಷಣೆಯನ್ನು ಪಡೆದನು

**ಮಹಾರಾಣಿ ಪ್ರಭಾವ :**

ಟಿಪ್ಪುವನ್ನು ಎದುರಿಸಲು ಬ್ರಿಟೀಷರು ನಿರ್ಧರಿಸಿದಾಗ ರಾಣಿಯು ಇಂಗ್ಲೀಷ್ ಸೈನ್ಯದೊಂದಿಗೆ ಟಿಪ್ಪುವಿನ ವಿರುದ್ಧವಾಗಿ ನಿಲ್ಲಲು ತನ್ನ ಪ್ರಭಾವವನ್ನು ಬಳಸಿ ತಿರುಮಲ ರಾವ್ ಮತ್ತು ನಾರಾಯಣರಾವ್ ಸೇರುವಂತೆ ಮಾಡಿದಳು ರಾಣಿಯ ಪರವಾಗಿ ನಾರಾಯಣರಾವ್ ಮದ್ರಾಸ್ ಗವರ್ನರ್ ಅನ್ನು ಭೇಟಿ ಮಾಡಿ ಅಲ್ಲಿಂದ ತಂಜಾವೂರಿಗೆ ಬಂದು ರಾಣಿಯ ಬರೆದು ಕೊಟ್ಟಿದ್ದ ಪತ್ರವನ್ನು ಗವರ್ನರ್‌ಗೆ ಕೊಟ್ಟು ರಾಣಿಯೊಡನೆ ಒಪ್ಪಂದವನ್ನು ಮಾಡಿಕೊಳ್ಳುವಂತೆ ತಿಳಿಸಿದನು. ರಾಣಿಯ ಇಚ್ಚೆಯಂತೆ ಎಲ್ಲವೂ ನಡೆಯುವುದೆಂದು ಗವರ್ನರ್ ಭರವಸೆ ನೀಡಿದ್ದನಾದರೂ ನಮ್ಮ ಮಿತ್ರರಾದ ನಿಜಾಮ ಮತ್ತು ಮಾರಾಠರ ಅನುಮತಿ ಇಲ್ಲದೆ ರಾಣಿಯೊಂದಿಗೆ ಒಪ್ಪಂದ ಮಾಡಿಕೊಳ್ಳುವುದು ಕಷ್ಟವೆಂದು ವಿಷಾದ ವ್ಯಕ್ತಪಡಿಸಿದ್ದನು. ಆದಾಗ್ಯೂ ತನ್ನ ಕೈಲಾದ ಸಹಾಯ ಮಾಡುವೆ ಎಂದು ತಿಳಿಸಿ ರಾಣಿಗೆ ಪತ್ರವನ್ನು ಬರೆದನು. ಇದರಿಂದ ತೃಪ್ತರಾಗದ ರಾಣಿಯ ಪ್ರಧಾನಿ ನಾರಾಯಣರಾವ್ ಮೆಡೋಸ್‌ನೊಂದಿಗೆ ದಂಡೆಯಾತ್ರೆಗಳಲ್ಲಿ ಭಾಗವಹಿಸುವಂತೆ ಕೋರಿಕೊಂಡರು.

ಆನಂತರ ರಾಣಿಯ ಪ್ರಧಾನರು ನೂರು ಅಶ್ವಗಳನ್ನು ಎರಡು ಸಾವಿರ ಕಾಲಾಳುಗಳನ್ನು ತೆಗೆದುಕೊಂಡು ಜನರಲ್ ಮೆಡೋಸ್‌ನೊಂದಿಗೆ ಕೊಯಮತ್ತೂರಿನ ಕಡೆ ಹೊರಟು ಮೊದಲು ಕರೂರನ್ನು ಅನಂತರ ವಿಜಯಮಂಗಲ ಮತ್ತು ಧಾರಾಪುರಂನ್ನು ವಶಪಡಿಸಿಕೊಂಡರು. ಇದನ್ನರಿತ ಟಿಪ್ಪು ಸುಲ್ತಾನ್ ಕೊಯಂಬತ್ತೂರಿನ ಮೇಲೆ ದಾಳಿ ಮಾಡಿ ಅಲ್ಲಿಯ ಜನರನ್ನು ಅರಣ್ಯಗಳತ್ತ ಓಡಿಸಿ ಶ್ರೀರಂಗಪಟ್ಟಣದತ್ತ ಧಾವಿಸಿದನು. ಜನಗಳ ಮೆಡೋಸ್ ಇದೆ ಸಮಯದಲ್ಲಿ ಕೊಯಮತ್ತೂರು ಆಕ್ರಮಿಸಿ ಕೊಂಡು ತಿರುಮಲಾರಾಯನನ್ನು ಅಮಲ್ದಾರ ಮತ್ತು ಮ್ಯಾನೇಜರ್ ಆಗಿ ನೇಮಿಸಿ ಕೊಯಮತೂರಿನಲ್ಲಿ ಉಳಿಯಲು ಬೇಕಾದ ಸೌಲಭ್ಯಗಳನ್ನು ಒದಗಿಸಿದನು. ಕೊಯಮತ್ತೂರಿನಲ್ಲಿ ಅನಿವಾರ್ಯವಾಗಿ ಉಳಿದ

ತಿರುಮಲರಾಯನ್ನು ಅಲ್ಲಿ ಒಂದು ಕಛೇರಿಯನ್ನು ತೆರೆದನು. ಅಲ್ಲಿಯ ರೈತನಿಗೆ ಆರ್ಥಿಕ ಸಹಾಯ ನೀಡಿದನು ಕೋಟೆಯನ್ನು ದುರಸ್ಥಿಗೊಳಿಸಿ ಬ್ರಿಟೀಷರ ನಂಬಿಕೆಗೆ ಹತ್ತಿರವಾದನು. ಇದರಿಂದಾಗಿ ಜನರಲ್ ಮೆಡೋಸ್‌ನು ತಿಂಗಳಿಗೆ ನೂರು ಪಗೋಡಗಳನ್ನು ಭತ್ಯೆಯಾಗಿ ತಿರುಮಲರಾಯನಿಗೆ ನೀಡಿದನು

ಮುಂದುವರೆದ ಟಿಪ್ಪು ಸೈನ್ಯ ಟಿಪ್ಪು ತಿರುಚನಾಪಳ್ಳಿಗೆ ಸೈನ್ಯ ಸಮೇತನಾಗಿ ಹೋಗಿ ಇಂಗ್ಲೀಷ್ ಸೇನಕ್ಕೆ ತೊಂದರೆ ಕೊಡಲು ಪ್ರಯತ್ನಿಸಿ ಸೋತ ಕೊಯಮತ್ತೂರಿನಲ್ಲಿ ಗಮನಹರಿಸಿ ಅಲ್ಲಿಯೂ ತನ್ನ ಕಾರ್ಯ ಫಲಿಸದೆ ಶ್ರೀರಂಗಪಟ್ಟಣಕ್ಕೆ ಬರುತ್ತಾನೆ. ಇದೇ ಸಮಯದಲ್ಲಿ ಮದ್ರಾಸ್‌ನಿಂದ ಮಿಸ್ಟರ್ ಕಾರ್ಟೇಜ್ ಎಂಬುವನನ್ನು ಕೊಯಮತ್ತೂರಿನ ಕಲೆಕ್ಟರನ್ನಾಗಿ ಕಳುಹಿಸಲಾಯಿತು. ಅವನ ಜನರಲ್ ಮೆಡೋಸ್‌ನನಿಗೆ ತಿರುಮಲರಾಯನನ್ನು ತನ್ನ ಸಹಾಯಕ್ಕಾಗಿ ಕಳಿಸುವಂತೆ ಕೇಳಿಕೊಂಡನು ಅದಕ್ಕೆ ಸಹಮತ ದೊರೆತ ಮೇಲೆ ತಾನು ಗವರ್ನರ್ ಜನರಲ್ ಲಾರ್ಡ್ ಕಾರನ್‌ವಾಲೀಸನೊಂದಿಗೆ ಶ್ರೀರಂಗಪಟ್ಟಣವನ್ನು ಮುತ್ತಿಗೆ ಹಾಕುವನೆಂದು ನಿರ್ದೇಶಿಸಿದನು.

**ಶ್ರೀರಂಗಪಟ್ಟಣದ ಮುತ್ತಿಗೆ :**

ಸಾ.ಶ.1798ರ ಡಿಸೆಂಬರ್ 31 ರಂದು ಗವರ್ನರ್ ಜನರಲ್‌ನಾದವನು ಮದ್ರಾಸಿಗೆ ಬಂದು ಟಿಪ್ಪುವಿನ ವಿರುದ್ಧವಾಗಿ ಯುದ್ಧ ಮಾಡಲು ಸಿದ್ಧನಾದನು. ಜನರಲ್ ಹ್ಯಾರಿಸ್ ಸಾ.ಶ. 1799ರ ಫೆಬ್ರವರಿ 11ರಂದು ವೆಲ್ಲೂರಿನಿಂದ ಹೊರಟು ಮೇ 4ರಂದು ಕೋಟೆಯನ್ನು ವಶಪಡಿಸಿಕೊಂಡನು. ಟಿಪ್ಪು ಯುದ್ಧದಲ್ಲಿ ಮರಣ ಹೊಂದಿದನು. ಮಹಾರಾಣಿ ಲಕ್ಷ್ಮಮ್ಮಣ್ಣಿ ಮದ್ರಾಸ್ ಗವರ್ನರಿಗೆ ಬರೆದ ಪತ್ರ : ಶ್ರೀರಂಗಪಟ್ಟಣದ ಯುದ್ಧಕ್ಕೆ ಮೊದಲೇ ರಾಣಿಯ ಮದ್ರಾಸ್ ಗವರ್ನರಿಗೆ ತನ್ನ ಮನೆತನಕ್ಕೆ ರಾಜ್ಯವನ್ನು ಹಿಂತಿರುಗಿಸಬೇಕೆಂದು ಕೇಳಿಕೊಂಡಿದ್ದಳು ರಾಜಮನೆತನದಿಂದ ರಾಜಕೀಯ ಅಧಿಕಾರವನ್ನು ಪುನಃ ಸ್ಥಾಪಿಸುವ ವಿಷಯವನ್ನು ಬ್ರಿಟೀಷ್ ಸರ್ಕಾರ ಗಂಭೀರವಾಗಿ ಪರಿಗಣಿಸಿತು ಹಾಗಾಗಿ ಟಿಪ್ಪುವಿನ ಮರಣ ನಂತರ ಗವರ್ನರ್ ಜನರಲ್‌ನು ಮೈಸೂರು ರಾಜ್ಯವನ್ನು ಅವರ ನ್ಯಾಯಬದ್ಧವಾದ ಹಾಗೂ ಕಾನೂನುಬದ್ಧವಾದ ರಾಜನಿಗೆ ವಹಿಸಲಾಗುತ್ತದೆಯೆಂದು ತಿರುಮಲರಾಯನನ್ನು ರಾಜ್ಯದ ಮಂತ್ರಿಯನ್ನಾಗಿ ಮಾಡುವುದೆಂದು ತಿಳಿಸಿದನು. ಈ ವಿಷಯವನ್ನು ತಿರುಮಲನು ಮಹಾರಾಣಿಗೂ ತಿಳಿಸಿ ಸಂತೋಷ ವ್ಯಕ್ತಪಡಿಸಿದನು. ಹಿರಿಯ ಮಹಾರಾಣಿ ತನ್ನ ಪ್ರಧಾನರ ಬಗ್ಗೆ ವಿಶೇಷವಾದ ಕೃತಜ್ಞತೆಗಳನ್ನು ತಿಳಿಸುತ್ತಾ ತನ್ನ 24 ವರ್ಷಗಳ ನಿರಂತರ ಕಷ್ಟ ಪರಂಪರೆಯನ್ನು ಸ್ಮರಿಸಿಕೊಳ್ಳುತ್ತಾಳೆ.

ಮುಂದೆ ಲಾರ್ಡ್ ವೆಲ್ಲೆಸ್ಲಿಯು ಹಿಂದೂ ರಾಜ್ಯವನ್ನು ಪುನರ್ ಸ್ಥಾಪಿಸಲು ತಿಳಿಸುತ್ತಾನೆ. ಅದರಂತೆ ಮಹಾರಾಣಿ ಲಕ್ಷ್ಮಮ್ಮಣ್ಣಿಯವರ ಮೊಮ್ಮಗನಾದ ಮೂರನೆಯ ಕೃಷ್ಣರಾಜ ಒಡೆಯರೆಂಬ ಐದು ವರ್ಷದ ಬಾಲಕನನ್ನು 1799ರ ಜೂನ್ 30ರಂದು ಸಿಂಹಾಸನದಲ್ಲಿ ಕೂರಿಸಿ ಪಟ್ಟಾಭಿಷೇಕವನ್ನು

ನೆರವೇರಿಸಲಾಗುತ್ತದೆ. ಪೂರ್ಣಯ್ಯನು ದಿವಾನನಾಗಿ ನೇಮಕಗೊಂಡನು. ಅನಂತರ ಜನರಲ್ ಹ್ಯಾರಿಸ್ ತಿರುಮಲ ರಾಯರನ್ನು ಮದ್ರಾಸಿಗೆ ಬರುವಂತೆ ತಿಳಿಸಿದನು. ಮಹಾರಾಣಿಯನ್ನು ಭೇಟಿಯಾಗಿ ಕೃತಜ್ಞತೆ ತಿಳಿಸಲು ಅವಕಾಶವಿಲ್ಲದಂತೆ ರಾಣಿ ಒಂದು ಪತ್ರವನ್ನು ಬರೆದು ಶಿಫಾರಸ್ಸು ಮಾಡಲು ಬೇಡಿಕೊಂಡನು. ಮಹಾರಾಣಿ ಇದಕ್ಕೆ ಸ್ಪಂದಿಸಿ ಕ್ಲೈವ್ ಮತ್ತು ಮ್ಯಾಕಟರ್‌ನಿಗೆ ಪತ್ರ ಬರೆದು ತಿರುಮಲರಾಯನ ಸ್ಥಾನದಲ್ಲಿ ಪೂರ್ಣಯ್ಯನನ್ನು ದಿವಾನನನ್ನಾಗಿ ನೇಮಕ ಮಾಡಿದುದಕ್ಕೆ ತನ್ನ ವಿರೋಧವಿದೆಯೆಂದು ತಿಳಿಸಿದಳು. ತಿರುಮಲರಾಯನನ್ನು ಮೈಸೂರಿಗೆ ಬೇಕೆಂದು ಪಟ್ಟ ಪ್ರಯತ್ನವೂ ಫಲಿಸಲಿಲ್ಲ. ಆದರೆ ರಾಜಮನೆತನಕ್ಕೆ ಅರಸೊತ್ತಿಗೆಯನ್ನು ತರುವ ಅವರ ಆಸೆ ನೆರವೇರಿತು. ಇದಕ್ಕಾಗಿ ಅವರು 24 ವರ್ಷಗಳ ಕಾಲಪಟ್ಟ ಪರಿಶ್ರಮ ಅವರ್ಣನೀಯವಾದುದು. ಮೈಸೂರು ರಾಜ್ಯವನ್ನು ಮಹಮದೀಯರ ಅಧೀನದಿಂದ ಬಿಡಿಸಿ ಪ್ರಾಚೀನ ರಾಜಮನೆತನದವರಿಗೆ ಅದನ್ನು ದೊರಕಿಸಿಕೊಟ್ಟ ಕೀರ್ತಿ ರಾಣಿ ಲಕ್ಷ್ಮಮ್ಮಣ್ಣಿಯವರಿಗೆ ಸಲ್ಲುತ್ತದೆ.

ರಾಣಿಯ ತಂತ್ರ ಬುದ್ಧಿವಂತಿಕೆ ಧೈರ್ಯ, ಸಮಯಪ್ರಜ್ಞೆ, ನಿರಂತರವಾಗಿ ನಡೆಸಿದ ಪ್ರಯತ್ನಗಳ ಒಡೆಯರ ಮನೆತನವನ್ನು ಮೈಸೂರು ಸಿಂಹಾಸನದಲ್ಲಿ ಪುನರ್ ಸ್ಥಾಪನೆಯಾಗಿ ಮುಂದುವರೆಯಲು ಸಹಕಾರಿಯಾದವು ಇಂತಹ ಅಸಾಮಾನ್ಯ ಸಾಧನೆಗಳಿಂದಾಗಿ ರಾಣಿ ಲಕ್ಷ್ಮಮ್ಮಣ್ಣಿಯವರು ಮೈಸೂರು ಒಡೆಯರ ಇತಿಹಾಸದಲ್ಲಿ ವಿಶೇಷವಾದ ಗೌರವ ಮತ್ತು ಸ್ಥಾನಮಾನಕ್ಕೆ ಅರ್ಹರಾಗಿದ್ದಾರೆ. ಎಂಬುದು ಸ್ಪಷ್ಟ ನಿದರ್ಶನವಾಗಿದೆ.

**ಪರಾಮರ್ಶನ ಗ್ರಂಥಗಳು**


1. ಕರ್ನಾಟಕ ಪರಂಪರೆ(ಸಂ)– ಮಧ್ಯಕಾಲ ಮತ್ತು ಆಧುನಿಕ ಕಾಲ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು2014, ಪುಟ 243
2. ಶಾಮರಾವ್ ಎಂ – ಆಧುನಿಕ ಮೈಸೂರು, ಬೆಂಗಳೂರು, 1936
3. ದಿವಾಕರ್ ಆರ್ ಆರ್(ಸಂ) – ಕರ್ನಾಟಕ ಪರಂಪರೆ, ಗಿಂಟ–1
4. ಕೇಶವಭಟ್ಟ – ಕರ್ನಾಟಕ ಇತಿಹಾಸ ದರ್ಶನ
5. C. Hayavadana Rao- History of Mysore, Vol-3
6. Hayavadana Rao C – Mysore Gazetteer – Vol-2
7. Basavaraj K R – History Of Karnataka and Culture